ಹಣೆಬರಹದಾಗ ಏನಿದೆಯೋ ಅದ ಆಗ್ತಾತ” ಅನ್ನುತ್ತಿದ್ದರು ಕಪಿನಿಪತಿರಾಯರು.

ರಕ್ತ ತೋರಿಸಿಕೊಂಡು ಬಂದ ದಿನವೇ ಕೊನೆ, ಜ್ಯೋತಿ ಒಂದು ಹರಳು ಸಕ್ಕರೆ ತಿನ್ನಲಿಲ್ಲ. ಬೆಳಿಗ್ಗೆ ಎದ್ದು ಕಾಲೇಜಿಗೆ ಹೊರಟರೆ ಸಂಜೆಯ ತನಕ ಅದೇ ದುಡಿಮೆ. ಮನೆಗೆ ಹೋಗುವುದೇ ಬೇಡವೆನಿಸುತ್ತಿತ್ತು. ಮಾವ ಇದ್ದಷ್ಟು ದಿನ ಒಂದೋ ಎರಡೋ ಒಳ್ಳೆ ಮಾತನಾಡುತ್ತಿದ್ದರು. ಅವರು ತೀರಿಕೊಂಡ ಮೇಲೆ ಒಳ್ಳೆಯ ಮಾತಿಗೂ ಕೊರತೆ. ಗೋಪಾಲಿ ಒಳ್ಳೆಯವನೆ. ಆದರೂ ವಿನೋದವಾಗಿ ಮಾತನಾಡುವ, ಹಾಡು ಕೇಳುವ, ಹಾಸ್ಯ ಮಾಡುವ ರಸಿಕತೆ ಇರಲಿಲ್ಲ. ಆಫೀಸಿನಿಂದ ಹಿಂತಿರುಗಿದ ಮೇಲೆ ಸಂಧ್ಯಾವಂದನೆ, ಪೂಜೆ ಮುಗಿಸಿ ಊಟ ಮಾಡಿ ಕಾಲು ಕವುಚಿಕೊಂಡು ಮಲಗಿ ಬಿಡುತ್ತಿದ್ದ. ಮಲಗಿದ ಮೂರನೇ ನಿಮಿಷಕ್ಕೆ ನಿದ್ದೆ. ಸತ್ತು ಹೋಯಿತು ಅನ್ನಲಿಕ್ಕೆ ಅವರ ಮಧ್ಯೆ ಕಾಮ ಚಿಗುರಿತ್ತಾದರೂ ಎಂದು? ಚೂಡಿದಾರ ಬಿಚ್ಚಿದರೆ ಜ್ಯೋತಿಯದು ಬೋಳು ಬೋಳು ಎದೆ. ಅಡ್ಡ ಪಂಚೆ ಬಿಚ್ಚಿದರೆ ಗೋಪಾಲಿಯವು ಎರಡು ನೆಟಾರು ಕಾಲು. ಆ ಕೋಣೆಯಲ್ಲಿ ದಾಂಪತ್ಯ ತಲೆ ಎತ್ತಿರಲೇ ಇಲ್ಲ.

ಅನೇಕ ಡಾಕ್ಟರುಗಳನ್ನು ಕಂಡ ಮೇಲೆ ತಮಗಿನ್ನು ಮಕ್ಕಳಾಗುವುದಿಲ್ಲವೆಂದು ತೀರ್ಮಾನಿಸಿ ಅವರೊಂದು ಮಗುವನ್ನು ದತ್ತಕಕ್ಕೆ ತೆಗೆದುಕೊಳ್ಳಲು ನಿರ್ಧರಿಸಿದ್ದರು. ಗೋಪಾಲಿ ಇದ್ದ ಗೆಳೆಯರಿಗೆಲ್ಲ ಹೇಳಿಟ್ಟಿದ್ದ. ಎಲ್ಲಾದ್ರೂ ಒಂದು ಕೂಸು ನೋಡಿ. ಸಾಕೋತೀವಿ. ಮೊದಲ ಬಾರಿಗೆ ಜ್ಯೋತಿ ಕಣ್ಣು ಫಳ್ ಎಂದಿತು. ಅದಕ್ಕೆ ತುಂಬ ದಿನ ಏನು ಹಿಡಿಯಲಿಲ್ಲ. ಧಾರವಾಡದ ನುಗ್ಗಿಕೇರಿ ಹಣುಮಪ್ಪನ ಗುಡಿಯ ಬಳಿ ಒಂದು ಸ್ಮಾರ್ತರ ಕುಟುಂಬ ಇತ್ತು. ಮನೆ ತುಂಬ ಮಕ್ಕಳು. ಐದು ಹೆಣ್ಣು, ಒಂದು ಗಂಡು. ಬಡತನಕ್ಕೆ ಮಕ್ಕಳು ಜಾಸ್ತಿ ಎಂಬುದು ಸುಳ್ಳಲ್ಲ. ಕೊನೆಯದು ಹೆಣ್ಣು ಮಗು. ಗೋಪಾಲಿಯ ಮನೆಗೆ ದತ್ತಕಕ್ಕೆ ಕೊಡಲು ಅವರು ತುದಿಗಾಲಲ್ಲಿ ಸಿದ್ಧರಿದ್ದರು. ಗೋಪಾಲಿ ಸಾವಿರ ನೋಟಿಗೆ ಇನ್ನೂರು ಸೇರಿಸಿ ಆ ಬಕ್ಕ ಬಕ್ಕ ಹೆಣ್ಣು ಮಗುವನ್ನು ತುಂಬ ಸಂಭ್ರಮದಿಂದ ಮನೆಗೆ ತಂದ. ಜ್ಯೋತಿಯ ಡಯಾಬಿಟೀಸು ಆಕಾಶಕ್ಕೇರಿತ್ತು. ಅದೇನು ತೋಚಿತೋ ಮಗುವಿಗೆ ವಿಶಾಲಾಕ್ಷಿ ಎಂದು ಹೆಸರಿಟ್ಟರು. ಜ್ಯೋತಿ ಮಾತ್ರ ಖುಷಿ ಖುಷಿ ಎಂದೇ ಕರೆದಳು. ಗೋಪಾಲಿಯೊಂದಿಗೆ ಹೋಗಿ ಮಗುವಿಗೆ ಚೀಟಿ ಚೀಟಿ ಅಂಗಿ, ಗಿಲಕಿ, ಕಾಲಿಗೆ ಗೊಲಸು, ಹಣೆಗೆ ಬಿಂದಿ, ಚಿಂಪರು ಕೂದಲಿಗೆ ರಿಬ್ಬನ್, ಒಂದಿಷ್ಟು ಕಾಡಿಗೆ ತಂದು ಇನ್ನಿಲ್ಲದಂತೆ ಸಂಭ್ರಮಪಟ್ಟಳು. ನಿಜಕ್ಕೂ ಆ ಮನೆಗೆ ಖುಷಿ ತಂದಿತ್ತು ಕೂಸು. ಆಫೀಸಿನಿಂದ ಬಂದಳೆಂದರೆ ಅದನ್ನು ಅವುಚಿಕೊಂಡವಳು ನೆಲಕ್ಕಿಳಿಸುತ್ತಿರಲಿಲ್ಲ. ಆ ಮಗುವಿಗಾಗಿಯೇ ಒಂದಷ್ಟು ಸಿನಿಮಾದ ಹಾಡು ಕಲಿತಳು. ಆಫೀಸು ಮುಗಿದ ಮೇಲೆ ಗೋಪಾಲಿ ಐದು ನಿಮಿಷ ನಿಲ್ಲುತ್ತಿರಲಿಲ್ಲ. ಹೆಗಲಿಗೆ ಮಗುವನ್ನು ಹಾಕಿಕೊಂಡು ಮೂರೂ ಜನ ಟಾಯವಾಕಕ್ಕೆ ವಾಕಿಂಗು ಹೋಗುತ್ತಿದ್ದರು. ಒಮ್ಮೊಮ್ಮೆ ನರಪೇತಲ ಮಗುವಿಗೆ ಅದೇನಾಗುತ್ತಿತ್ತೋ, ಶುರುವಿಟ್ಟ ಅಳು ನಿಲ್ಲಿಸುತ್ತಿರಲಿಲ್ಲ. ಅದನ್ನು ನಿಲ್ಲಿಸಲಿಕ್ಕಾಗಿ ಗೋಪಾಲಯ್ಯ ಹಾಡು ಕಲಿತ. “ಆಹಾ ರಿಮ್ ಜಿಮ್ ಎ ಪ್ಯಾರೇ ಪ್ಯಾರೇ ಗೀತ್ ಲಿಯೇ ಆಯಿ ರಾತ್ ಸುಹಾನಿ ದೇಖೋ ಪ್ರೀತ್ ಲಿಯೇ.” ಒಂದು ವಿಚಿತ್ರವೆಂದರೆ ಆ ಮನೆಗೆ ಮುಸುರೆ ತಿಕ್ಕಲು ನರಸಮ್ಮ ಎಂಬುವವಳೊಬ್ಬಳು ಬರುತ್ತಿದ್ದಳು. ಅವಳು ಆ ಕೂಸನ್ನು ವಿಶಾಲಾಕ್ಷಿ ಅಂತಲೂ ಅನ್ನುತ್ತಿರಲಿಲ್ಲ. ಖುಷಿ ಅಂತಲೂ ಅನ್ನುತ್ತಿರಲಿಲ್ಲ. ಸೊಂಟಕ್ಕೆ ಹಾಕಿಕೊಂಡು ಆ ನರಪೇತಲ ಮಗುವನ್ನು ಪಿಳ್ಳಿ ಪಿಳ್ಳಿ ಅನ್ನುತ್ತಿದ್ದಳು. ಒಟ್ಟಿನಲ್ಲಿ ಒಬ್ಬೊಬ್ಬರಿಗೆ ಒಂದೊಂದು ರೀತಿಯಾಗಿ ಆ ಮಗು ಇಷ್ಟವಾಗಿಬಿಟ್ಟಿತ್ತು. ಮನೆಯಲ್ಲಿ ಏನೋ ಆತಂಕ. ಗೋಪಾಲಿಯ ಮನೆ ಸೇರಿದ ಮೇಲೆ ಖುಷಿ ಸ್ವಲ್ಪ ಮೈಕೈ ತುಂಬಿಕೊಂಡಿತು. ಅದಕ್ಕೆ ದೊಡ್ಡ ದೊಡ್ಡ ಕಣ್ಣುಗಳಿದ್ದವು.